**ಅಂತ ತಮಗನ್ನಿಸಿದೆ? ಇದು ತೃಪ್ತಿಕರವಾಗಿದೆಯೆ? ಇಲ್ಲವೆಂದಾದರೆ ಕನ್ನಡ ಕಾವ್ಯಮೀಮಾಂಸೆ ಕ್ರಮಿಸಬೇಕಾದ ದಾರಿ ಯಾವುದು?**

ಶುದ್ಧ ಕನ್ನಡ ಕಾವ್ಯ ಮೀಮಾಂಸೆ ಅನ್ನುವಂಥದ್ದರ ಬಗ್ಗೆ ನನಗೆ ಅಂಥ ಒಲವಿಲ್ಲ. ಈ ಕುರಿತು ಒಂದು ಅವಸರ ಕನ್ನಡದಲ್ಲಿ ಸಂಭವಿಸಿತು. ಯಾವುದನ್ನು ನಾವು ಸಂಸ್ಕೃತ ಮೀಮಾಂಸೆ ಅಂತ ಕರೀತೀವಿ ಅದನ್ನು ಈ ಮೊದಲು ಭಾರತೀಯ ಕಾವ್ಯಮೀಮಾಂಸೆ ಅಂತ ಕರೀತಿದ್ರು. ಅಲ್ಲದೆ, ಇಲ್ಲಿ ಭಾರತೀಯ ಅನ್ನುವಂಥದ್ದನ್ನು ಕೂಡ ಈಗ ಬಳಸುವ ಸಂಕುಚಿತ ಅರ್ಥದಲ್ಲಿ ಹಿಂದಿನವರು ಬಳಸಲಿಲ್ಲ. ಅದು ಅನೇಕ ದೇಸಿ, ಶಾಬ್ದಿಕ ಅಶಾಬ್ದಿಕ ಕ್ರಿಯೇಟಿವ್ ಎಲಿಮೆಂಟ್‌ಗಳೇನಿದ್ದಾವೆ, ಪ್ರಾದೇಶಿಕ ಪ್ರಕಾರಗಳೇನಿದ್ದಾವೆ, ಇವೆಲ್ಲವುಗಳನ್ನು ಒಳಗೊಂಡೇ ಬಳಸಲಾಗಿತ್ತು. ಸಮುದಾಯಕ್ಕೆ ಆಪ್ತವಾಗಿದ್ದ ಕಲೆಗಳಿವು. ಸಮಗ್ರ ಕಲೆಯ ದರ್ಶನವನ್ನು ಕೊಡುವಂಥ ಪದ ಅದು. ಈಗಲೂ ರಸಮೀಮಾಂಸೆ ಇದ್ದೇ ಇದೆ. ಅದು ಇರದೇ ಇದ್ದರೆ ಅನೇಕ ಶಾಬ್ದಿಕ ಅಶಾಬ್ದಿಕ ಕಲೆಗಳಿಗೆ ಅರ್ಥ ಇಲ್ಲ. ಅಲ್ಲೊಂದು ಅಲಂಕಾರ, ರೀತಿ ಬರದೇ ಇದ್ರೆ ಅವುಗಳಿಗೆ ಅರ್ಥ ಇಲ್ಲ. ಹೇಗೆ ಹೇಳಬೇಕು ಅನ್ನೋ ಒಂದು ಕ್ರಮ ಇದೆಯಲ್ಲ ಅದು ಯಾವ ಕಾಲಕ್ಕೂ ಮುಖ್ಯವಾದದ್ದೆ. ಆಂಗಿಕ ಚಲನೆ, ದೈಹಿಕ ಚಲನೆ ಪ್ರತಿಯೊಂದರ ಕುರಿತು ಯೋಚಿಸಿದ್ದಾರೆ. ಈ ಎಲ್ಲಾ ತತ್ತ್ವಗಳನ್ನು ನಾವು ಸಂಸ್ಕೃತದ್ದೆಂದು ಹೇಳಿ ನಮ್ಮ ಸೃಜನಶೀಲತೆಯ ಅನೇಕ ಪ್ರಕಾರಗಳನ್ನು ನೋಡುವ, ಕಾಣುವ, ಚರ್ಚಿಸುವ ಮಾದರಿಗಳೇನಿವೆ ಅವುಗಳನ್ನು ಹಾಗೆಯೇ ಕೈಬಿಡಬೇಕೆ? ಇದು ನನ್ನನ್ನು ಕಾಡಿದ ಪ್ರಶ್ನೆ. ಅರೆ! ನಿಮಗೆ ನೋಡಲಿಕ್ಕೆ ಸಾಧ್ಯವಾಗ್ತಿಲ್ಲ ಅಂದಮಾತ್ರಕ್ಕೆ ಆ ತತ್ತ್ವಗಳನ್ನೇ ದೋಷಪೂರಿತ ಅಂತ ಹೇಳೋದೆ? ನೀವು ಕೇವಲ ಕೆಲವೇ ಟೂಲ್ಸ್‌ಗಳನ್ನು ತೆಗೆದುಕೊಂಡು ಬಂದು ಅಲಂಕಾರ, ರೀತಿ, ರಸಗಳನ್ನ ಕಿತ್ತೊಗೆಯಿರಿ ಅಂದ್ರೆ ಏನರ್ಥ? ಇದು ಸಂಸ್ಕೃತದ್ದು ಅದಕ್ಕೆ ತೆಗೆದು ಹಾಕಿ ಅಂದ್ರೆ ಏನರ್ಥ? ಇವರು ಬ್ರಾಹ್ಮಣರು ಅದಕ್ಕೆ ಓದಬಾರದು, ಇದು ಸಂಸ್ಕೃತದ್ದು ಅದಕ್ಕೆ ಓದಬಾರದು ಇವೆರಡೂ ಹೆಚ್ಚೂ ಕಡಿಮೆ ಒಂದೇ ಮನಃಸ್ಥಿತಿಯ ಅಭಿಪ್ರಾಯಗಳು. ಒಂದು ವೇಳೆ, ಇದೆಲ್ಲ ಶುಷ್ಕವಾದದ್ದು ಅಂತಾಗಿದ್ರೆ ಬೇಂದ್ರೆ, ಕುವೆಂಪು ಅಂಥವರು ರಸಮೀಮಾಂಸೆಯನ್ನು ಯಾಕೆ ಹೊಸ ಭಿತ್ತಿಯಲ್ಲಿ ಹೇಳಬೇಕಾಗಿತ್ತು. ಬೇಂದ್ರೆಯಂತಹ ದೇಸಿ ಕವಿ ಸಮರಸದ ಹೊಸ ಕಲ್ಪನೆ ಕೊಡಲಿಕ್ಕೆ ಹೇಗೆ ಸಾಧ್ಯವಾಯ್ತು? ಭರತ ಹೇಳಿದಂಥ ರಸದ ಕಲ್ಪನೆಯನ್ನು ಸಂಸ್ಕೃತದ್ದು ಅಂತ ಹೇಳಬಾರದು. ಅದು ಸಂಸ್ಕೃತ ಭಾಷೆಯಲ್ಲಿ ರಚನೆಯಾದರೆ ಏನ್ ಮಾಡಲಿಕ್ಕಾಗುತ್ತೆ? ಅದೊಂದು ಸೃಜನಶೀಲತೆಯನ್ನು ಅರಿಯುವ ತತ್ತ್ವ. ಭರತನ ನಾಟ್ಯಶಾಸ್ತ್ರದ ರಸಗಳು ಕನ್ನಡದ ಭಿನ್ನ ವ್ಯಾಖ್ಯಾನಗಳಿಗೆ, ಸಂವೇದನೆಗಳಿಗೆ ಕಾರಣವಾಗಿವೆಯಲ್ಲವೆ? ಕುವೆಂಪು ಅಂಥವರು ಭೂಮದ ಕಲ್ಪನೆ ತಂದರಲ್ಲ, ಅದು ಕೂಡ ರಸದ ಕಲ್ಪನೆಯಿಂದಲೇ ಬಂದಂಥದ್ದು. ಭೂಮಾನುಭೂತಿಯ ಕಲ್ಪನೆ ಇದೆಯಲ್ಲ, ಅದು. ಆ ಅನುಭೂತಿ ಆಯ್ತೊ ಇಲ್ವೊ ಅದು ಇನ್ನೊಂದು ವಾಗ್ವಾದದ ಪ್ರಶ್ನೆ. ಆದರೆ, ಅಂಥದ್ದನ್ನು ಉದ್ದೀಪಿಸಿತಲ್ಲ ಅದು ಯಾವುದು? ಅವರ ಅನೇಕ ಬರಹಗಳಲ್ಲಿ ಕಾಣುವ ಈ ಭೂಮಾನುಭೂತಿಯ ಕಲ್ಪನೆಯನ್ನು ಅನುಭವಿಸಬಹುದೇ ಹೊರತು ಬಹಳ ಸಲ ಅದನ್ನು ವಿವರಿಸಲಿಕ್ಕೆ ಆಗೋದಿಲ್ಲ. ಈ ತರಹದ್ದನ್ನು ಹಿಡಿಯಬಹುದಾದ ಮೀಮಾಂಸೆ ಕನ್ನಡದ್ದೊ ಅಥವಾ ಇನ್ಯಾವುದು ಭಾಷೆಯದೊ ಅಂತ ಚರ್ಚೆ ಮಾಡುವುದೇ ಅಸಂಬದ್ಧ. ಕನ್ನಡ ಮೀಮಾಂಸೆ ಕಟ್ಟಿಕೊಂಡ ಸ್ವತಂತ್ರವಾದ ಚಿಂತನೆಯನ್ನೂ ಹೇಳೋಣ. ಉದಾಹರಣೆಗೆ, ಈ ವರ್ಣಕದ ಮಾದರಿ. ಈ ವರ್ಣಕ ಕೂಡ ಅನೇಕ ಬಗೆಯದಾಗಿದೆ. ಸಂಸ್ಕೃತಕ್ಕಿಂತ ಭಿನ್ನವಾಗಿ ಅನೇಕರಲ್ಲಿ ಬಳಕೆಯಾಗಿದೆ. ಇದನ್ನೆಲ್ಲ ಹೇಳೋಣ. ಲಯಬದ್ಧವಾದಂಥ ಅಭಿವ್ಯಕ್ತಿಯ ಸ್ವರೂಪಗಳು ಕನ್ನಡದಲ್ಲಿ ಹೇಗಿವೆ, ಇದೆಲ್ಲವನ್ನು ಹೇಳೋಣ. ಬೇಂದ್ರೆಯವರನ್ನು ಓದುವಾಗ ಕೇವಲ ಶಬ್ದ ಮಾತ್ರ ಮುಖ್ಯ ಅಲ್ಲ. ಅದರ ನಾದ, ಲಯ, ಪ್ರಾಸ ಎಲ್ಲವೂ ಮುಖ್ಯವೇ. ಹಾಗೆಯೇ ಭಾವ. ಈ ಎಮೋಷನ್ ಕೂಡ ಕಾವ್ಯದ ಒಂದು ಭಾಗವೇ ಆಗಿದೆ. ಕನ್ನಡ ಸೃಜನಶೀಲತೆ